

# 'ಐರಾ' ಮತ್ತು ಒಂದಿರುಳು...

'ಐರಾ' – ಹಾಗೆಂದರೆ ಏನು?

ಇದು ಹುಡುಗಿಯೊಬ್ಬಳ ಹೆಸರು. ಪಾಶ್ಚಿಮಾತ್ಯ ಸಂಸ್ಕೃತಿಗೆ ಮಾರುಹೋದ ತರುಣಿ ಈ ಐರಾ. ಒಂದು ರಾತ್ರಿಯಲ್ಲಿ, ಅವಳ ಬದುಕಿನಲ್ಲಿ ಏನೆಲ್ಲ ಘಟನೆಗಳು ಸಂಭವಿಸುತ್ತವೆ ಎನ್ನುವುದು ಚಿತ್ರದ ಕಥೆ. ಇಷ್ಟರ ಹೊರತು, 'ಐರಾ' ಸಿನಿಮಾದ ಬಗ್ಗೆ ಉಳಿದೆಲ್ಲವನ್ನೂ ನಿರ್ದೇಶಕ ಹರಿಕೃಷ್ಣ ಗುಟ್ಟು ಮಾಡುತ್ತಾರೆ. ಮತ್ತೂ ಕೆದಕಿ ಕೇಳಿದರೆ ಅವರು ಹೇಳುವುದು: 'ಇದು ಆಕ್ಷನ್ ಮತ್ತು ಥ್ರಿಲ್ಲರ್ ಕಥನ.

'ಐರಾ'ಳ ಪಾತ್ರದಲ್ಲಿ ಕೃಷಿ ತಾಪಂಡ ನಟಿಸುತ್ತಿದ್ದಾರೆ. ವಸಿಷ್ಠ ಹಾಗೂ ರಾಜವರ್ಧನ್ ಚಿತ್ರದ ನಾಯಕರು. 'ಇದೊಂದು ತ್ರಿಕೋನ ಪ್ರೇಮಕಥೆಯಾ?' ಎಂದು ಪ್ರಶ್ನಿಸಿದರೆ, ಚಿತ್ರತಂಡ ಮತ್ತೆ ಹೇಳುವುದು – 'ಇದೊಂದು ಥ್ರಿಲ್ಲರ್'. ಅತುಲ್ ಕುಲಕರ್ಣಿ ತಾರಾಗಣದಲ್ಲಿರುವ ಮತ್ತೊಬ್ಬ ಪ್ರಮುಖ ಕಲಾವಿದ.

ರಾತ್ರಿಯಲ್ಲಿ ನಡೆಯುವ ಕಥೆಯಾದುದರಿಂದ ಹರಿಕೃಷ್ಣ ಮತ್ತು ಬಳಗ ರಾತ್ರಿಗಳಲ್ಲಿ ನಿದ್ದೆಗೆಟ್ಟೇ ಚಿತ್ರೀಕರಣ ನಡೆಸಿದೆ. ಕತ್ತಲು ಕೂಡ ಸಿನಿಮಾದ ಒಂದು ಪಾತ್ರವಂತೆ. ಅಂದಹಾಗೆ, ಜ್ಯೂಡಾ ಸ್ಯಾಂಡಿ ಸಂಗೀತ ಹಾಗೂ ಗಿರಿಗೌಡ ಛಾಯಾಗ್ರಹಣ ಚಿತ್ರಕ್ಕಿದೆ. ಇರುಳಲ್ಲಿ ಶೂಟಿಂಗ್ ನಡೆಸಿರುವುದು ಗಿರಿ ಅವರಿಗೆ ಚಾಲೆಂಜಿಂಗ್ ಎನ್ನಿಸಿದೆ.

ಕಳೆದ ವಾರ 'ಐರಾ' ಚಿತ್ರದ ವಿಶಿಷ್ಟ ಪೋಸ್ಟರ್ ಬಿಡುಗಡೆಯಾಗಿದೆ. ಅಲ್ಲಿಗೆ ಚಿತ್ರದ ಬಿಡುಗಡೆಗೆ ಸಂಬಂಧಿಸಿದ ಪ್ರಚಾರ ಕಾರ್ಯಕ್ರಮಕ್ಕೆ ಚಾಲನೆ ದೊರೆತಂತಾಯಿತು.



# ಗಾಂಧಿನಗರದಲ್ಲಿ 'ಸುನಾಮಿ'

ಕಿರುತೆರೆಯಲ್ಲಿ 'ಸುನಾಮಿ' ಎಂದೇ ಹೆಸರಾದ ಕಿಟ್ಟಿ ಈಗ ಬೆಳ್ಳಿತೆರೆಯ ನಂಟು ಬೆಳೆಸಿದ್ದಾರೆ. ಸಿನಿಮಾಗಳಲ್ಲಿ ನಟಿಸಬೇಕು ಎನ್ನುವ ಅವರ ಕನಸನ್ನು ನಿರ್ದೇಶಕ ಪಿ. ಮೂರ್ತಿ ನನಸು ಮಾಡುತ್ತಿದ್ದಾರೆ. ಕಿಟ್ಟಿ ನಾಯಕ ಪಾತ್ರದಲ್ಲಿ ನಟಿಸಲಿರುವ 'ಆದಿವಾಸಿ' ಚಿತ್ರದ ಮುಹೂರ್ತ ಕಳೆದವಾರ ನಡೆಯಿತು. ಹಿರಿಯ ನಟ ಶಿವರಾಜ್‌ಕುಮಾರ್ ಮುಹೂರ್ತ ಸಂದರ್ಭದಲ್ಲಿ ಹಾಜರಿದ್ದು ಕಿಟ್ಟಿ ಹಾಗೂ ಚಿತ್ರತಂಡಕ್ಕೆ ಶುಭ ಹಾರೈಸಿದರು.

'ಡಾನ್ಸಿಂಗ್ ಸ್ಟಾರ್', 'ಇಂಡಿಯನ್' ಹಾಗೂ 'ಬಿಗ್ ಬಾಸ್' ರಿಯಾಲಿಟಿ ಷೋಗಳಲ್ಲಿ ಭಾಗವಹಿಸುವ ಮೂಲಕ ಕಿಟ್ಟಿ ತಮ್ಮದೇ ಆದ ಅಭಿಮಾನಿ ಬಳಗವನ್ನು ಕಿರುತೆರೆಯಲ್ಲಿ ಸಂಪಾದಿಸಿಕೊಂಡಿದ್ದಾರೆ. ಮುಗ್ಧತೆ ಹಾಗೂ ದೈಹಿಕ ಶಕ್ತಿ ಕಿಟ್ಟಿ ಅವರ ವ್ಯಕ್ತಿತ್ವದ ಆಕರ್ಷಕ ಗುಣಗಳು. ಕೆಳ ಮಧ್ಯಮ ವರ್ಗದ ಕುಟುಂಬದ ಕಿಟ್ಟಿ ರಿಯಾಲಿಟಿ ಷೋಗಳನ್ನೇ ಮೆಟ್ಟಿಲಾಗಿ ಬಳಸಿಕೊಂಡಿದ್ದು ಚಿತ್ರರಂಗದವರೆಗೆ ಬೆಳೆದು ನಿಂತಿದ್ದಾರೆ.

'ಆದಿವಾಸಿ' ಸಿನಿಮಾ ಕಾಡಿನ ಅಂಚಿನಲ್ಲಿ ಬದುಕುವ ಜನರ ತವಕ–ತಲ್ಲಣಗಳ ಕಥೆಯನ್ನು ಒಳಗೊಂಡಿರುವ ಸಿನಿಮಾ. ಈ ಚಿತ್ರದ ಮೂಲಕ ಆದಿವಾಸಿಗಳ ಬದುಕಿನ ಸೌಂದರ್ಯ ಹಾಗೂ ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಚಿತ್ರಿಸುವುದು ನಿರ್ದೇಶಕ ಮೂರ್ತಿ ಅವರ ಉದ್ದೇಶ. ಶೀರ್ಷಿಕೆಯೊಂದಿಗೆ ತಳಕು ಹಾಕಿಕೊಂಡಿರುವ 'ಕಾಡೇ ನನ್ನ ಆಸ್ತಿ' ಎನ್ನುವ ವಿಶೇಷ ಚಿತ್ರಕ್ಕೊಂದು 'ಪರಿಸರ ಪ್ರೀತಿ'ಯ ಆಯಾಮವನ್ನೂ ಒದಗಿಸುವಂತಿದೆ. ಶಿವಮೊಗ್ಗದ ಸುತ್ತಮುತ್ತಲಿನ ಪರಿಸರದಲ್ಲಿ ಚಿತ್ರೀಕರಣ ನಡೆಯಲಿದೆ. ಶಿಲ್ಪಾ ಎನ್ನುವ ಹೊಸ ಹುಡುಗಿ ಕಿಟ್ಟಿಯೊಂದಿಗೆ ಡ್ಯುಯೆಟ್ ಹಾಡುತ್ತಿದ್ದಾರೆ.

■ ರಘು